ಲಾಲ್‌ಬಾಗ್ ಸಿದ್ದಾಪುರದ ವಸತಿ ಗೃಹಗಳ ದುರಸ್ಥಿ.

558:(4028)

ಶ್ರೀ ಎಸ್.ಸುರೇಶ್‌ಕುಮಾರ್ (ರಾಜಾಜಿನಗರ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚಿನ ಮಳೆಯಿಂದ ತೀವ್ರ ಹಾನಿಗೊಳಗಾದ ಲಾಲ್‌ಬಾಗ್ ಸಿದ್ದಾಪುರದ ವಸತಿಗೃಹಗಳನ್ನು ದುರಸ್ತಿಗೊಳಿಸಲು ಸಮೀಕ್ಷೆ ಮಾಡಲಾಗಿದೆಯೇ; ಹಾಗಿದ್ದಲ್ಲಿ ಯಾವಾಗ ಮಾಡಲಾಗಿದೆ?

ಆ) ಹಾಗಿಲ್ಲದಿದ್ದಲ್ಲಿ ಕೂಡಲೇ ಸಮೀಕ್ಷೆ ನಡೆಸಿ ದುರಸ್ತಿ ಕಾರ್ಯ ಕೈಗೊಳ್ಳಲಾಗುವುದೆ?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):

ಅ) ಹೌದು ಸಮೀಕ್ಷೆಯನ್ನು ದಿನಾಂಕ: 3-11-98ರ ವರೆಗೆ ನಡೆಸಲಾಗಿದೆ.

ಆ) ಇತ್ತೀಚಿನ ಮಳೆಯಿಂದ ಸಣ್ಣ ಬಿರುಕುಗಳು ಕಂಡು ಬಂದಿವೆ. ಇದಕ್ಕೆ ತಜ್ಞರಿಂದ ಸಲಹೆಯನ್ನು ಪಡೆದು ಅಂದಾಜನ್ನು ತಯಾರಿಸಿದ ನಂತರ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಮೈಸೂರು ನಗರದ ಪೋಲೀಸ್ ವಸತಿ ಗೃಹಗಳ ದುರಸ್ತಿ

559:(3935)

ಶ್ರೀ ಇ.ಮಾರುತಿರಾವ್ ಪವಾರ್ (ನರಸಿಂಹರಾಜ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದ ಜ್ಯೋತಿನಗರದ ಪೋಲೀಸ್ ವಸತಿಗೃಹ ಎ ಮತ್ತು ಬಿ ಬ್ಲಾಕ್ ಜಲಪುರಿ ಪೋಲೀಸ್ ವಸತಿಗೃಹ ಎ, ಬಿ ಮತ್ತು ಸಿ ಬ್ಲಾಕ್ ಹಾಗೂ 3ನೇ ಇನ್‌ಫೆಂಟ್ರಿ ಲೈನ್ ವಸತಿಗೃಹಗಳ ರಸ್ತೆ ಚರಂಡಿ ಹಾಗೂ ಒಳಚರಂಡಿಯು ಲೋಕೋಪಯೋಗಿ ಇಲಾಖೆ ವತಿಯಿಂದ ದುರಸ್ತಿಯಾಗದೆ ಸುಮಾರು 40 ವರ್ಷಗಳಿಂದ ನಾದುರಸ್ತಿಯಲ್ಲಿಯೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಕಾಮಗಾರಿಗಳನ್ನು ಕೈಗೊಳ್ಳಲು ವಿಳಂಬ ಮಾಡುತ್ತಿರುವ ಅಧಿಕಾರಿಗಳ ಮೇಲೆ ಅಗತ್ಯ ಶಿಸ್ತು ಕ್ರಮ ಕೈಗೊಳ್ಳಲಾಗಿದೆಯೇ?